**ಸಾಕ್ಷಿಯನ್ನು ದಿಃ 17.09.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿಗಳಪರ ಶ್ರೀ ಆರ್ ಕೆ ವಕೀಲರಿಂದಃ–**

ನನ್ನ ಜನ್ಮ ದಿನಾಂಕ 01.09.1974. ನನ್ನ ಮದುವೆ 2000 ನೇ ಇಸವಿಯಲ್ಲಿ ಆಗಿದೆ. ತಂದೆ ತಾಯಿ ನೋಡಿ ಮದುವೆ ಮಾಡಿದ್ದಾರೆ. 1 ನೇ ಪ್ರತಿವಾದಿ ಸ್ವಲ್ಪ ಓದಿದ್ದಾರೆ. ಅವರು ವಿದ್ಯಾವಂತರು. 2 ನೇ ಪ್ರತಿವಾದಿ ಎಸ್ ಎಸ್ ಎಲ್ ಸಿ ಓದಿದ್ದಾರೆ. 3 ನೇ ಪ್ರತಿವಾದಿ ಪಿಯುಸಿ ಓದಿದ್ದಾರೆ. 4 ನೇ ಪ್ರತಿವಾದಿ ಪದವಿ ಓದಿದ್ದಾರೆ. 1 ನೇ ಪ್ರತಿವಾದಿಯ ಗಂಡು ಮಕ್ಕಳು ಅಂದರೆ ನನ್ನ ಸಹೋದರರು ಕೊತ್ತೇಗಾಲ ಗ್ರಾಮದಲ್ಲಿ ವಾಸ ಇದ್ದಾರೆ. ಅವರು ಜಮೀನಿನ ಒಳಗೆ ಇರುವ ಹಂಚಿನ ಮನೆಯಲ್ಲಿ ವಾಸ ಇದ್ದಾರೆ. ಸದರಿ ಮನೆಯು ಸರ್ವೆ ನಂಬರ್ 103 ರಲ್ಲಿ ಬರುತ್ತದೆ. ನನ್ನ ತಂದೆಯ ಬಗ್ಗೆ ನನಗೆ ಗೌರವ ಇದೆ. ನನ್ನ ತಂದೆಗೆ ಯಾವುದೇ ದುಷ್ಚಟ ಇಲ್ಲ. ನನ್ನ ಮದುವೆಯನ್ನು 1 ನೇ ಪ್ರತಿವಾದಿಯೇ ಮಾಡಿದ್ದಾರೆ. ಈ ದಾವೆಯ ಬಗ್ಗೆ ನನಗೆ ಗೊತ್ತಿದೆ. ದಿನಾಂಕ 21.04.2010 ರಂದು 1 ರಿಂದ 4 ನೇ ಪ್ರತಿವಾದಿಯರು ದಾವಾ ಷೆಡ್ಯೂಲ್ ಐಟಂ ನಂಬರ್ 2 ನ್ನು 5 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 9 ರಲ್ಲಿ ಇರುವ ಭಾವಚಿತ್ರಗಳು ನನ್ನ ತಂದೆ ಮತ್ತು ಸಹೋದರರಾದ 1 ರಿಂದ 4 ನೇ ಪ್ರತಿವಾದಿಯರದ್ದು ಆಗಿದೆ ಸಾಕ್ಷಿ ಮುಂದುವರೆದು ಆ ದಾಖಲೆಯನ್ನು ಸೃಷ್ಠಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ 9 ರ ದಾಖಲೆಯನ್ನು ಯಾರು ಸೃಷ್ಠಿ ಮಾಡಿದ್ದಾರೆ ಎಂದರೆ ಸಾಕ್ಷಿಯು 5 ರಿಂದ 7 ನೇ ಪ್ರತಿವಾದಿಯರ ವಕೀಲರನ್ನು ತೋರಿಸಿ ನೀವೇ ಸೃಷ್ಠಿ ಮಾಡಿದ್ದೀರಿ ಎಂದು ಹೇಳುತ್ತಾರೆ. ಜಮೀನು ವ್ಯಾಪಾರ ಆಗಿದೆ ಮೋಸ ಮಾಡಬೇಕೆಂದು ನಿಪಿ 9 ನ್ನು ಸೃಷ್ಠಿ ಮಾಡಿದ್ದಾರೆ. 2010 ರಲ್ಲಿ ಆ ದಾಖಲೆಯನ್ನು ಸೃಷ್ಠಿ ಮಾಡಿದ್ದಾರೆ. 2010 ರಲ್ಲಿ ನನ್ನ ವಯಸ್ಸು 42. ನಿಪಿ 9 ರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡಿದ್ದೇನೆ.

ನಿಪಿ 9 ರ ದಾಖಲೆಯ ಪ್ರಕಾರ 1 ರಿಂದ 4 ನೇ ಪ್ರತಿವಾದಿಯರು ದಾವಾ ಷೆಡ್ಯೂಲ್ ಐಟಂ ನಂಬರ್ 2 ನ್ನು ರೂ 4,66,000/- ಮಾರಾಟ ಮಾಡಿದ್ದಾರೆ ಎಂದರೆ ಮೋಸದಿಂದ ಮಾರಾಟ ಮಾಡಿದ್ದಾರೆ. ಸದರಿ ದಾವಾ ಷೆಡ್ಯೂಲ್ ಐಟಂ ನಂಬರ್ 2 ನ್ನು 1 ನೇ ಪ್ರತಿವಾದಿಯು ದಿನಾಂಕ 17.04.2009 ರಂದು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ 9 ರಲ್ಲಿ ಅದರ ಉಲ್ಲೇಖ ಇದೆ ಎಂದರೆ ದಾಖಲೆಯನ್ನು ನೋಡಿ ಸುಳ್ಳು ಬರೆಸಿದ್ದಾರೆ ಎಂದು ನುಡಿಯುತ್ತಾರೆ. ನಿಪಿ 9 ರ ದಾಖಲೆಯನ್ನು ಮೋಸದಿಂದ ಮಾಡಿದ್ದಾರೆ ಎಂದು ಇಲ್ಲಿಯವರೆಗೂ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿಲ್ಲ. ದಾವೆ ಹಾಕುವ ಕಾಲಕ್ಕೆ ದಾವಾ ಷೆಡ್ಯೂಲ್ ಐಟಂ ನಂಬರ್ 2 ರ ಕಂದಾಯ ದಾಖಲೆಗಳು 5 ರಿಂದ 7 ನೇ ಪ್ರತಿವಾದಿಯರ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಮೀನಿನ ಅನುಭವವನ್ನು 1 ರಿಂದ 4 ನೇ ಪ್ರತಿವಾದಿಯರು ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು 2022 ರಲ್ಲಿ 1 ರಿಂದ 4 ನೇ ಪ್ರತಿವಾದಿಯರ ಬಳಿ ದಾವಾ ಆಸ್ತಿಗಳ ಬಗ್ಗೆ ಕೇಳಿದ್ದೇನೆ. ದಾವೇ ಹಾಕುವ ಕಾಲಕ್ಕೆ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ಹಾಜರುಪಡಿಸಿದ್ದೇನೆ. ದಾವೇ ಹಾಕುವ ಕಾಲಕ್ಕೆ ದಾವಾ ಷೆಡ್ಯೂಲ್ ಐಟಂ ನಂಬರ್ 2 ಮತ್ತು 3 ರ ಕಂದಾಯ ದಾಖಲೆಗಳು 5 ರಿಂದ 7 ನೇ ಪ್ರತಿವಾದಿಯರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 3 ನೇ ಆಸ್ತಿಯನ್ನು 1 ನೇ ಪ್ರತಿವಾದಿ 5 ನೇ ಪ್ರತಿವಾದಿಯ ಗಂಡನಿಗೆ ದಿನಾಂಕ 31.07.2017 ರಂದು ಶುದ್ಧ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು 1 ನೇ ಪ್ರತಿವಾದಿಗೆ ದಿನಾಂಕ 11.11.2010 ರ ಕ್ರಯ ಪತ್ರದ ಮೂಲಕ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂಬರ್ 2 ಮತ್ತು 3 ನ್ನು 1 ನೇ ಪ್ರತಿವಾದಿ ತಮ್ಮ ದರದ್ದು ನಿಮಿತ್ತ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಆಧಾರದ ಮೇಲೆ ಅದರ ಖಾತೆಯು 5 ನೇ ಪ್ರತಿವಾದಿಯ ಗಂಡನ ಹೆಸರಿಗೆ ದಾಖಲಾಗಿ ಅವರೇ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. ಅನುಭವ 1 ರಿಂದ 4 ನೇ ಪ್ರತಿವಾದಿಯರ ಬಳಿ ಇತ್ತು.

5 ನೇ ಪ್ರತಿವಾದಿಯ ಗಂಡನ ಮರಣಾನಂತರ ದಾವಾ ಐಟಂ ನಂಬರ್ 2 ಮತ್ತು 3 ರ ಖಾತೆಯು 5 ರಿಂದ 7 ನೇ ಪ್ರತಿವಾದಿಯರ ಹೆಸರಿಗೆ ವಾರಸು ಪ್ರಕಾರ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ 3 ನ್ನು ನನ್ನ ತಂದೆ ತಮ್ಮ ದರದ್ದು ನಿಮಿತ್ತ ರೂ 2 ಲಕ್ಷಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಕ್ರಯ ಪತ್ರಗಳ ನಂತರ 1 ರಿಂದ 4 ನೇ ಪ್ರತಿವಾದಿಯರೇ ದಾವಾ ಐಟಂ ನಂಬರ್ 2 ಮತ್ತು 3 ರ ಸ್ವಾಧೀನದಲ್ಲಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಕ್ರಯವಾದ ನಂತರ ಕಂದಾಯ ಕಟ್ಟಿದ್ದೇವೆ. ನಾನು ಹಾಜರುಪಡಿಸಿದ ಎಲ್ಲಾ ದಾಖಲೆಗಳಲ್ಲಿ ದಾವಾ ಐಟಂ ನಂಬರ 2 ಮತ್ತು 3 ಸ್ವತ್ತಿನ ಮೇಲೆ ನಮ್ಮ ಸ್ವಾಧೀನತೆಯನ್ನು ತೋರಿಸುತ್ತದೆ. ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 16.06.2022 ರಿಂದ ನನಗೂ ಮತ್ತು 1 ರಿಂದ 4 ನೇ ಪ್ರತಿವಾದಿಯರಿಗೂ ಮಾತುಕತೆ ಇಲ್ಲ. ನನ್ನ ತಾಯಿಯ ಜೊತೆ ಮಾತನಾಡುವುದಿಲ್ಲ. ನನ್ನ ತಾಯಿಯ ಹೆಸರು ಕಾಂತಮ್ಮ. ದಿನಾಂಕ 16.06.2022 ಕ್ಕೂ ಪೂರ್ವದಲ್ಲಿ ನಾನು ಅವರೊಂದಿಗೆ ಚೆನ್ನಾಗಿದ್ದೆ. 5 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಆಗಿರುವ ಆಸ್ತಿಗಳನ್ನು ಹೊಡೆಯಬೇಕೆಂದು ನಾನು ಮತ್ತು 1 ರಿಂದ 4 ನೇ ಪ್ರತಿವಾದಿಯರು ಶಾಮೀಲಾಗಿ ಈ ಸುಳ್ಳು ದಾವೆಯನ್ನು ತಂದಿದ್ದೇವೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ಎಂಆರ್ ನಂಬರ್ ಹೆಚ್7-2021-22 ರ ಪ್ರಕಾರ ಸರ್ವೆ ನಂಬರ್ 144/8 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಪಹಣಿಯಲ್ಲಿರುವ ಸರ್ವೆ ನಂಬರ್ 103/1 ರಲ್ಲಿ 4 ಎಕರೆ 23 ಗುಂಟೆ ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು.

ಚನ್ನಬಸಪ್ಪ ಬಿನ್ ಸಿದ್ದಪ್ಪ ಎಂದರೆ ನನ್ನ ತಾತ. ನಿಪಿ 3 ರಲ್ಲಿರುವ ಸರ್ವೆ ನಂಬರ್ 102/5 ರಲ್ಲಿ 7 ಗುಂಟೆ ನನ್ನ ತಾತ ಚನ್ನಬಸಪ್ಪ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ನಿಪಿ 3 ರಲ್ಲಿ ಸರ್ವೆ ನಂಬರ್ 140 ರಲ್ಲಿ 3 ಎಕರೆ 25 ಗುಂಟೆ ನನ್ನ ತಾತನ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂಬರ್ 103 ರಲ್ಲಿ 4 ಎಕರೆ 18 ಗುಂಟೆ ನನ್ನ ತಾತನ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂಬರ್ 109 ರಲ್ಲಿ 11 1/2 ಗುಂಟೆ ನನ್ನ ತಾತನ ಹೆಸರಿನಲ್ಲಿ ಇದೆ. ಕಲ್ಲಹಳ್ಳಿ ಗ್ರಾಮದ ಸರ್ವೆ ನಂಬರ್ 19 ರಲ್ಲಿ 2 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 103/2 ರಲ್ಲಿ ಇರುವ ಮನೆಗೆ ನನ್ನ ತಂದೆಯ ಹೆಸರಿನಲ್ಲಿ ಡಿಮ್ಯಾಂಡ್ ರಿಜಿಸ್ಟರ್ ಇದೆ. ಸದರಿ ಮನೆ 40*60 ವಿಸ್ತೀರ್ಣದಲ್ಲಿದೆ. ನಿಪಿ 9 ಮತ್ತು 10 ರ ದಾಖಲೆಗಳು ಮೋಸದಿಂದ ಕೂಡಿದೆ ಎಂದು ಇಲ್ಲಿಯವರೆಗೂ ನಾನು ಎಲ್ಲಿಯೂ ಪ್ರಶ್ನಿಸಿಲ್ಲ. ಕ್ರಯವಾದಾಗಲೇ ಆ ವಿಷಯ ನನ್ನ ಗಮನದಲ್ಲಿ ಇತ್ತು ಎಂದರೆ ಇಲ್ಲ. 5 ರಿಂದ 7 ನೇ ಪ್ರತಿವಾದಿಯರು ನನ್ನ ಹಾಗೂ 1 ರಿಂದ 4 ನೇ ಪ್ರತಿವಾದಿಯರ ವಿರುದ್ಧ ದಾವಾ ಐಟಂ ನಂಬರ್ 2 ಮತ್ತು 3 ನೇ ಸ್ವತ್ತುಗಳ ಬಗ್ಗೆ ಅಸಲು ದಾವೆ ಸಂಖ್ಯೆ 226/2022 ಬಾಕಿ ಇದೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು 5 ರಿಂದ 7 ನೇ ಪ್ರತಿವಾದಿಯರು ಕ್ರಯ ಪತ್ರದ ಆಧಾರದ ಮೇಲೆ ದಾವಾ ಐಟಂ ನಂಬರ್ 2 ಮತ್ತು 3 ಅವರ ಹೆಸರಿನಲ್ಲಿ ಇದ್ದರೂ ಕೂಡ ನಾವು ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ಸಹೋದರರ ವಿರುದ್ಧ 5 ನೇ ಪ್ರತಿವಾದಿಯು ಮೈಸೂರಿನ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 94/2023 ನ್ನು ದಾಖಲಿಸಿದ್ದಾರೆ ಎಂದರೆ ಸರಿ. 5 ನೇ ಪ್ರತಿವಾದಿ ನನಗೆ ಪರಿಚಯ ಇಲ್ಲ. ಅವರ ಮಕ್ಕಳಾದ 6 ಮತ್ತು 7 ನೇ ಪ್ರತಿವಾದಿಯರು ಗೊತ್ತಿಲ್ಲ. 5 ನೇ ಪ್ರತಿವಾದಿಯ ಗಂಡ ಗೊತ್ತಿಲ್ಲ. 5 ರಿಂದ 7 ನೇ ಪ್ರತಿವಾದಿಯರನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಮಾತುಕತೆ ಆದ ನಂತರ ದಾಖಲೆಯನ್ನು ತೆಗೆದಾಗ 5 ರಿಂದ 7 ನೇ ಪ್ರತಿವಾದಿಯರ ಬಗ್ಗೆ ಗೊತ್ತಾಗಿ ಅವರನ್ನು ಸೇರಿಸಿದ್ದೇನೆ. 5 ನೇ ಪ್ರತಿವಾದಿಯ ಗಂಡ

ಸೌದಿ ಅರೇಬಿಯಾ ದಲ್ಲಿ ವೈದ್ಯರಾಗಿದ್ದರು ಎಂದರೆ ಗೊತ್ತಿಲ್ಲ. ಅವರು ಮೂಲತಃ ಮಂಡ್ಯ ಜಿಲ್ಲೆಯ ಕೆ ಎಂ ದೊಡ್ಡಿ ಹೋಬಳಿಯ ಅಣ್ಣೂರು ಗ್ರಾಮದವರು ಎಂದರೆ ಗೊತ್ತಿಲ್ಲ. ಅವರು ನಮ್ಮ ಕುಟುಂಬದ ಸ್ನೇಹಿತರು ಮತ್ತು ನನ್ನ ತಂದೆಯ ಆತ್ಮೀಯರು ಎಂದರೆ ಸರಿಯಲ್ಲ. ಅವರು ಸೌದಿ ಅರೇಬಿಯಾ ದಲ್ಲಿ ಇದ್ದಾಗ ವ್ಯವಸಾಯದ ಆಸ್ತಿಯನ್ನು ಖರೀದಿಸಬೇಕೆಂಬ ಇಚ್ಚೆಯಿಂದ ನನ್ನ ತಂದೆಯ ಪರಿಚಯವಾಗಿ ದಾವಾ ಐಟಂ ನಂಬರ್ 2 ಮತ್ತು 3 ನ್ನು ಖರೀದಿಸಿದರು ಎಂದರೆ ಸರಿಯಲ್ಲ. ಖರೀದಿಯ ನಂತರ 5 ನೇ ಪ್ರತಿವಾದಿಯ ಗಂಡನ ಹೆಸರಿಗೆ ಎಲ್ಲಾ ಕಂದಾಯ ದಾಖಲೆಗಳು ಆಗಿವೆ ಎಂದರೆ ಸರಿಯಲ್ಲ. ಅನುಭವ ನಮ್ಮ ಬಳಿ ಇತ್ತು. ನಮ್ಮ ಬಳಿ ಅನುಭವ ಇತ್ತು ಎಂದು ಪದೇ ಪದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ಗಂಡ ದಿನಾಂಕ 11.05.2020 ರಂದು ತೀರಿಕೊಂಡರು ಎಂದರೆ ಗೊತ್ತಿಲ್ಲ. ಅವರು ತೀರಿಕೊಂಡ ನಂತರ ಅವರ ಆಸ್ತಿಯನ್ನು ಲಪಟಾಯಿಸಬೇಕೆಂದು ಯಾವುದೇ ವ್ಯಾಜ್ಯ ಕಾರಣ ಇಲ್ಲದೆ ಇದ್ದರೂ ನಾನು ಮತ್ತು 1 ರಿಂದ 4 ನೇ ಪ್ರತಿವಾದಿಯರು ಶರೀಕಾಗಿ ಈ ಸುಳ್ಳು ದಾವೆ ತಂದಿದ್ದೇವೆ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ್ 1 ರಲ್ಲಿ ಇರುವ ಸರ್ವೆ ನಂಬರ್ 103/2 ರ ಬಗ್ಗೆ 2 ಎಕರೆ 18 ಗುಂಟೆಗೆ 5 ನೇ ಪ್ರತಿವಾದಿಯ ಗಂಡನ ಹೆಸರಿಗೆ ದಿ 20.06.2011 ರಂದು ಕ್ರಯದ ಕರಾರನ್ನು ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರನ್ನು ಮಾಡಿಕೊಟ್ಟು ಜಮೀನು ದುರಸ್ತ ಆಗಿಲ್ಲ ಎಂದು ಕಾರಣಗಳನ್ನು ನೀಡಿ ಅವರಿಂದ ಹಣ ಪಡೆದುಕೊಳ್ಳುತ್ತಾ ನನ್ನ ತಂದೆ ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಸಹೋದರರು ಒಟ್ಟು ರೂ 68,90,000/- ಹಣ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ಹಣ ಪಡೆದುಕೊಂಡ ಬಗ್ಗೆ ಕಾಲ ಕಾಲಕ್ಕೆ ದಾಖಲೆಯನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕರಾರಿನ ಬಾಬ್ತು ಮೈಸೂರು ನ್ಯಾಯಾಲಯದಲ್ಲಿ ದಾವೆ ದಾಖಲಾಗಿದೆ ಎಂದರೆ ದಾವೆ ದಾಖಲಾಗಿರುವುದು ನಿಜವಾಗಿದೆ ಹಣ ಕೊಟ್ಟಿಲ್ಲ. ನಾನು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 226/2022 ರಲ್ಲಿ

ಹುಣಸೂರು ಸಿವಿಲ್ ಜಡ್ಜ್ ನ್ಯಾಯಾಲಯ ವಿಚಾರಣೆ ಮಾಡಿ 5 ರಿಂದ 7 ನೇ ಪ್ರತಿವಾದಿಯರ ಪರವಾಗಿ ಪ್ರತಿಬಂದಕಾಜ್ಞೆ ನೀಡಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಲಪಟಾಯಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ದಾಖಲೆಯನ್ನು ವ್ಯವಸಾಯ ದೃಢೀಕರಣ ಪತ್ರ ಪಡೆಯಲು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ಕೊತ್ತೇಗಾಲದಲ್ಲಿ ವಾಸ ಮಾಡುತ್ತಿಲ್ಲ. ಮದುವೆ ಆದಾಗಿನಿಂದ ನನ್ನ ಗಂಡನ ಮನೆಯಲ್ಲಿ ವಾಸ ಇದ್ದೇನೆ. 1 ನೇ ಪ್ರತಿವಾದಿಯ ಮಗಳು ನಾನು ಎಂದು ತೋರಿಸಲು ನಿಪಿ 1 ರ ದಾಖಲೆಯನ್ನು ಹೊರತುಪಡಿಸಿ ಬೇರೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. 5 ರಿಂದ 7 ನೇ ಪ್ರತಿವಾದಿಯರ ಪ್ರಕಾರ ನಾನು 1 ನೇ ಪ್ರತಿವಾದಿಯ ಮಗಳಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಹೆಚ್ ಜೆ ಎಸ್ ಪರ ಶ್ರೀ ಬಿ ಎಂ ಎಸ್ ವಕೀಲರಿಂದಃ**

ಕಾಲಾವಕಾಶ ಕೋರಿದ್ದು ನೀಡಲಾಗಿದೆ.

**ಮರುವಿಚಾರಣೆ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.